ಎಲ್ಲಾ ಸೀಟುಗಳೂ ಕಿತ್ತುಹೋಗಿದ್ದು ಇವುಗಳನ್ನು ಬದಲಾಯಿಸಿರುವುದಿಲ್ಲ. ಇದರ ಜೊತೆಗೆ ಈ ಚಿತ್ರಮಂದಿರದಲ್ಲಿ ಹವಾನಿಯಂತ್ರಣ ಸೌಲಭ್ಯವಿಲ್ಲದೆ ಕೇವಲ ಕೆಲವೇ ಫ್ಯಾನುಗಳನ್ನು ಹಾಕಿರುವುದರಿಂದ ಚಲನಚಿತ್ರಮಂದಿರದ ದುರಸ್ತಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಈ ವಿಚಾರವನ್ನು ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದು ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸುತ್ತೇನೆ.

(3) ಮೂಡಿಗೆರೆ ತಾಲ್ಲೂಕಿನಲ್ಲಿ ಪಿ. ಹೆಚ್. ಸಿ. ಕಟ್ಟಡಗಳನ್ನು ಆರೋಗ್ಯ ಇಲಾಖೆಗೆ ವಹಿಸುವ ಬಗ್ಗೆ.

ಶ್ರೀಮತಿ ಮೋಟಮ್ಮ(ಮೂಡಿಗೆರೆ):- ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಮೂಡಿಗೆರೆ ತಾಲ್ಲೂಕಿನ ಬಿ. ಹೊಸಹಳ್ಳಿ ಹಾಗೂ ದಾಸರಹಳ್ಳಿ ಮಂಡಲದ ಊರು ಬಗೆಯಲ್ಲಿ ಜಿಲ್ಲಾ ಪರಿಷತ್ತಿನಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡವನ್ನು ಕಟ್ಟಿ ಎರಡು ವರ್ಷವಾದರೂ ಆರೋಗ್ಯ ಇಲಾಖೆಗೆ ವಹಿಸದೆ, ಅನಾಥವಾಗಿ ನಿಂತಿರುವ ಕಟ್ಟಡವನ್ನು ಜನ ನೋಡಿ, ಏನಾಗಿದೆ ಈ ಕಟ್ಟಡಗಳಿಗೆ ಆಸ್ಪತ್ರೆ ಏಕೆ ನಡೆಸುತ್ತಿಲ್ಲ ಅನ್ನುವ ಹಾಗಾಗಿದೆ. ಇನ್ನೂ ಎಷ್ಟು ವರ್ಷಗಳು ಬೇಕು- ಈ ಹೊಸ ಕಟ್ಟಡಗಳಿಗೆ ಪಿ. ಹೆಚ್. ಸಿ. ಷಿಫ್ಟ ಮಾಡಲು? ಈ ಪಿ. ಹೆಚ್. ಸಿ. ಹೊಸ ಕಟ್ಟಡಗಳ ಯಾವುದೇ ಕೆಲಸ ಬಾಕಿ ಇದ್ದರೆ ಅದಕ್ಕೆ ಕಾರಣವೇನು? ಯಾವ ಕಂಟ್ರಾಕ್ಟರ್ ಎಂದು ತಿಳಿದು ಜಿಲ್ಲಾ ಪರಿಷತ್ತಿಗೆ ಕ್ರಮ ತೆಗೆದುಕೊಳ್ಳಲು ತಿಳಿಸಿ ಕೂಡಲೇ ಬಿ. ಹೊಸಹಳ್ಳಿ ಹಾಗೂ ಊರುಬಗೆ ಹೊಸ ಪಿ. ಹೆಚ್. ಸಿ. ಕಟ್ಟಡಗಳನ್ನು ಆರೋಗ್ಯ ಇಲಾಖೆಗೆ ತೆಗೆದುಕೊಂಡು ಆಸ್ಪತ್ರೆ ನಡೆಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ(ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಣಿಯವರೆ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡ ಬಯಸುತ್ತೇನೆ. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಬಿ. ಹೊಸಹಳ್ಳಿ ಅಥವಾ ಭಾರತ ಬಯಲು ಎಂಬ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಘಟಕದ ಕಟ್ಟಡದ ಕೆಲಸ ಸುಮಾರು ಒಂದು ವರ್ಷದ ಹಿಂದೆ ಅಂದರೆ, ದಿನಾಂಕ 19-3-1991ರಲ್ಲಿ ಮುಗಿದಿರುತ್ತದೆ. ಆದರೆ ಕಟ್ಟಡಕ್ಕೆ ಇಲ್ಲಿಯವರೆಗೆ ವಿದ್ಯುತ್ ಪೂರೈಕೆ ಮಾಡಿರುವುದಿಲ್ಲ. ಈ ಕಟ್ಟಡವು ಗ್ರಾಮಕ್ಕೆ ಸುಮಾರು ಒಂದು ಕಿಲೋ ಮೀಟರ್ ದೂರದಲ್ಲಿ ಇದ್ದು, ಇದರ ವಿದ್ಯುತ್ ಪೂರೈಕೆಗಾಗಿ ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿಗೆ ಹಲವಾರು ಪತ್ರಗಳನ್ನು ಬರೆಯಲಾಗಿದೆ. ಈ ಕಟ್ಟಡಕ್ಕೆ ವಿದ್ಯುತ್ ಪೂರೈಸಲು 5 ವಿದ್ಯುತ್ ಕಂಬಗಳನ್ನು ನೆಡಬೇಕಾಗಿದ್ದು, ಇದಕ್ಕೆ ಹಳ್ಳಿಯ ಕೆಲವು ಜನರು ವಿರೋಧಿಸಿರುತ್ತಾರೆ. ಈ ವಿವಾದ ಬಗೆಹರಿದ ನಂತರ ಕಟ್ಟಡಕ್ಕೆ ವಿದ್ಯುತ್ ಸರಬರಾಜು ಮಾಡಿ, ಕಟ್ಟಡವನ್ನು ಈ ಇಲಾಖೆಯ ವಶಕ್ಕೆ ಕೊಟ್ಟು ಕೂಡಲೇ ಆರೋಗ್ಯ ಘಟಕವನ್ನು ಇಲ್ಲಿಗೆ ಸ್ಥಳಾಂತರಿಸಲಾಗುವುದು.

ಇದೇ ತರಹ ದಾಸರಹಳ್ಳಿ ಮಂಡಲದ ಊರುಬಗೆಯಲ್ಲಿ ಸಹ ಕಟ್ಟಡದ ಕೆಲಸ ಸೆಪ್ಟೆಂಬರ್1991ರಲ್ಲಿ ಮುಗಿದಿರುತ್ತದೆ. ಈ ಕಟ್ಟಡಕ್ಕೂ ಸಹ ವಿದ್ಯುತ್ ಪೂರೈಕೆ ಆಗಿರುವುದಿಲ್ಲ. ಕಟ್ಟಡಕ್ಕೆ ವಿದ್ಯುತ್ ಸರಬರಾಜು ದೊರೆತು ಅದನ್ನು ಇಲಾಖೆಗೆ ವಹಿಸಿಕೊಟ್ಟ ಕೂಡಲೇ ಆರೋಗ್ಯ ಘಟಕವನ್ನು ಅಲ್ಲಿಗೆ ಸ್ಥಳಾಂತರಿಸಲಾಗುವುದು.

(4) ಮಂಗಳೂರು ತಾಲ್ಲೂಕಿನ ಕುಳಾಯಿಯಲ್ಲಿರುವ ನಿರಾಶ್ರಿತ ಮೀನುಗಾರರಿಗೆ ಹಕ್ಕು

ಪತ್ರ ನೀಡದೇ ಇರುವ ಬಗ್ಗೆ.

ಶ್ರೀ ಬಾಬುರಾವ್ ಚಿಂಚನಸೂರ್ (ಚಿತ್ತಾಪುರ):- ಮಾನ್ಯ ಉಪಾಧ್ಯಕ್ಷಣಿಯವರೇ, 28 ವರ್ಷಗಳಾದರೂ ಮಂಗಳೂರು ತಾಲ್ಲೂಕಿನ ಕುಳಾಯಿಯಲ್ಲಿರುವ ನಿರಾಶ್ರಿತ ಮೀನುಗಾರರಿಗೆ ನೀಡಿರುವ ಸ್ಥಳಕ್ಕೆ ಸರ್ಕಾರ ಹಕ್ಕು ಪತ್ರ ನೀಡಿಲ್ಲದಿರುವುದು. ಹಾಗೂ ಶಾಲೆಗಾಗಿ ಸ್ಥಳವನ್ನು ಜಿಲ್ಲಾ ಪರಿಷತ್ತಿಗೆ ಹಸ್ತಾಂತರಿಸಲಾಗಿದೆ. ಇದರಿಂದಾಗಿ ಮಂಜೂರು ಮಾಡಬೇಕಾಗಿದ್ದ ಪ್ರೌಢಶಾಲೆ ಮಂಜೂರಾಗದಿರುವುದು. ನಿರಾಶ್ರಿತ ಮೀನುಗಾರರಿಗೆ ನೀಡಬೇಕಾಗಿದ್ದ ಆರೋಗ್ಯ ಕೇಂದ್ರದ ಸ್ಥಾಪನೆ ಮತ್ತು ಮೀನುಗಾರಿಕಾ ಚಿಟ್ಟಿಯ ನಿರ್ಮಾಣ ಹಾಗೂ ನವಮಂಗಳೂರು ಬಂದರು ಮತ್ತು ಅದರ ಆಶ್ರಿತ ಕಾರ್ಖಾನೆಗಳಲ್ಲಿ ಮನೆಗೊಬ್ಬನಿಗೆ ಉದ್ಯೋಗ ನೀಡಿಲ್ಲದಿರುವುದು.

ಶ್ರೀ ಎ. ಎಂ. ಬೆಳ್ಳಿಯಪ್ಪ(ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು):- ಇದಕ್ಕೆ ಉತ್ತರಿಸಲು ನನಗೆ ನಾಳೆಯವರೆಗೆ ಸಮಯ ಬೇಕಾಗಿದೆ. ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಉತ್ತರ ಒದಗಿಸುತ್ತೇನೆ.

ಶ್ರೀ ಬಾಬುರಾವ್ ಚಿಂಚನಸೂರ್:- ನನಗೆ ನಾಳೆ ಉತ್ತರ ಸಿಗಲೇಬೇಕು.

ಉಪಾಧ್ಯಕ್ಷಣಿಯವರು:- ಮಂತ್ರಿಗಳು ಉತ್ತರ ಕಳಿಹಿಸಿಕೊಡುವುದಾಗಿ ಹೇಳಿದ್ದಾರೆ, ಕುಳಿತುಕೊಳ್ಳಿ.

SRI. A. M. BELLIYAPPA:- Yesterdary I got the reply, I was not satisfied. I have asked the officers to send correct reply. I will supply to him.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾವಿಸಲಾದ ವಿಷಯ

ನಿಮ್ಹಾನ್ಸ್ ಆಸ್ಪತ್ರೆಯ ಬಳಿ ಇರತಕ್ಕ ಗುಡಿಸಲುಗಳನ್ನು ಸ್ಥಳಾಂತರಿಸುವ ಬಗ್ಗೆ.

ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ):- ಮಾನ್ಯ ಅಧ್ಯಕ್ಷರೇ, ನಿಮ್ಹಾನ್ಸ್ ಆಸ್ಪತ್ರೆ ಹತ್ತಿರ 250 ಗುಡಿಸಲುಗಳು ಇವೆ. ಅವು ಬೋರ್ಡ್‌ನಿಂದ ನೋಟಿಫೈ ಆಗಿವೆ. ಅವನ್ನು ಪಕ್ಕದಲ್ಲೇ ಇರತಕ್ಕ ಭೈರಸಂದ್ರ ಟ್ಯಾಂಕ್ ಕಡೆ ಷಿಫ್ಟ್ ಮಾಡುತ್ತಿದ್ದಾರೆ; ಅಂದರೆ ಮಾಡಿ ಎಂದು ಹೇಳಿದ್ದಾರೆ. ಷಿಫ್ಟ್ ಮಾಡತಕ್ಕ ಜಾಗದಲ್ಲಿ ಸ್ಯಾನಿಟರಿ ಇಲ್ಲ, ವಾಟರ್ ಸಪ್ಲೈ ಇಲ್ಲ, ಬೀದಿ ದೀಪ ಇಲ್ಲ. ಅಲ್ಲಿರತಕ್ಕವರು ಬಡಜನರು ಮತ್ತು ಕೂಲಿಕಾರರು. ಅವರ ಗುಡಿಸಲುಗಳನ್ನು ಕಿತ್ತುಹಾಕಿದರೆ ಪುನಃ ಕಟ್ಟಿಕೊಳ್ಳುವುದಕ್ಕೆ ಹಣ ಬೇಡವೇ? ಎರಡು ದಿನ ಸಮಯವಾದರೂ ಕೊಡಬೇಕಲ್ಲ. 250 ಕುಟುಂಬಗಳು ಅಂದರೆ 700-800 ಜನ ಆಗುತ್ತಾರೆ. ಹೆಣ್ಣುಮಕ್ಕಳು ಬಾತ್ ರೂಮಿಗೆ ಎಲ್ಲಿ ಹೋಗಬೇಕು? ಕಾರ್ಪೊರೇಷನ್‌ನವರನ್ನು ಕೇಳುವುದಕ್ಕೆ ಹೋದರೆ ಹಚ್. ಯು. ಡಿ. ಸೆಕ್ರೆಟರಿ ಅವರ ಆದೇಶ ಇದೆ ಎಂದು ಪೊಲೀಸ್ ಸಹಾಯ ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಉಪಾಧ್ಯಕ್ಷಣಿಯವರೇ, ಮಾನ್ಯ ಸದಸ್ಯರಾದ ರಾಮಲಿಂಗಾರೆಡ್ಡಿಯವರು ಏನು ವಿಚಾರ ಎತ್ತಿದ್ದಾರೆ ಅದನ್ನು ತಕ್ಷಣ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಗಮನಕ್ಕೆ ನಾನು ತರುವುದು ಮಾತ್ರವಲ್ಲದೆ ಇದರ ಬಗ್ಗೆ ತಕ್ಷಣ ಒಂದು ವರದಿಯನ್ನು ತರಿಸಿ ಅವರಿಗೆ ತಿಳಿಸುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ:- ಗುಡಿಸಲುಗಳನ್ನು ಕಿತ್ತುಹಾಕದಹಾಗೆ ಆದೇಶ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಅದನ್ನು ವಿಚಾರ ಮಾಡಿ ನೋಡುತ್ತೇವೆ.